ಓ. ಎಸ್. ನಂಃ 218/2014

ಡಿ ಡಬ್ಲ್ಯೂಃ 2

**ದಿ.4-12-2015 ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಹೆಚ್ ಎಂ ಆರ್ ವಕೀಲರಿಂದಃ-**

ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವಂತೆ ವಾದಿಯ ಅಣ್ಣ ನಂಜುಂಡಪ್ಪ ಯಾವ ಸಾಲಿನಲ್ಲಿ ಮೃತಪಟ್ಟಿರುತ್ತಾನೆ ನನಗೆ ತಿಳಿದಿಲ್ಲ. ವಾದಿ ಹಾಗೂ ಆತನ ಸೋದರರು ಯಾವ ಸಾಲಿನಲ್ಲಿ ವಿಭಾಗಮಾಡಿಕೊಂಡಿರುತ್ತಾರೆ ನನಗೆ ತಿಳಿದಿಲ್ಲ.

ಸದರಿ ವಿಭಾಗ ಸಮಯದಲ್ಲಿ ಯಾರು ಯಾರು ಹಾಜರಿದ್ದರು ನನಗೆ ತಿಳಿದಿಲ್ಲ. ಸದರಿ ವಿಭಾಗ ಯಾರ ಯಾರ ನಡುವೆ ಆಗಿರುತ್ತದೆ ನನಗೆ ತಿಳಿದಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸ್ವತ್ತು ಸರ್ವೇ ನಂ.11ಕ್ಕೆ ಸಂಬಂಧಿಸಿರುತ್ತದೆ. ಸದರಿ ಸರ್ವೇ ನಂ.ನಲ್ಲಿ ವಾದಿ ಅಣ್ಣ ನಂಜುಂಡಪ್ಪನಿಗೆ 1 ಎಕರೆ 26 ಗುಂಟೆ ಮತ್ತು 5 ಗುಂಟೆ ಸ್ವತ್ತುಗಳು ಬಂದಿರುತ್ತದೆ. ಸದರಿ ನಂಜುಂಡಪ್ಪ ತನ್ನ ಜೀವಿತ ಕಾಲದಲ್ಲಿ ಹೆಬ್ಬಳ್ಳಿಯಲ್ಲಿ ವಾಸಿಸುತ್ತಿದ್ದನು. ವಾದಿಯ ಒಟ್ಟು ಕುಟುಂಬಕ್ಕೆ ಎಷ್ಟು ಜಮೀನುಗಳು ಇದ್ದವು ನನಗೆ ತಿಳಿದಿಲ್ಲ, ಸಾಕ್ಷಿ ಮುಂದುವರೆದು ಅವರಿಗೆ 4 ಮನೆಗಳು ಇದ್ದವು ಎಂದು ನುಡಿಯುತ್ತಾರೆ. ಸದರಿ ವಿಭಾಗ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಸದರಿ ವಿಭಾಗದಲ್ಲಿ ಯಾರು ಯಾರಿಗೆ ಯಾವ ಸ್ವತ್ತುಗಳು ಬಂದಿರುತ್ತವೆ ಎಂದರೆ ಸಾಕ್ಷಿ ವಾದಿಗೆ ಸರ್ವೇ ನಂ.11ರಲ್ಲಿ 1 ಎಕರೆ 26ಗುಂಟೆ ಮತ್ತು 5 ಗುಂಟೆ ಜಮೀನು. ಕಲ್ಲಪ್ಪನಿಗೆ ಸರ್ವೇನಂ.11ರಲ್ಲಿ 2 ಎಕರೆ 1 ಗುಂಟೆ. ರುದ್ರಪ್ಪನಿಗೆ ಸರ್ವೇ ನಂ.11ರಲ್ಲಿ 1 ಎಕರೆ. ಈಶ್ವರಪ್ಪನಿಗೆ ಸರ್ವೇ ನಂ.11ರಲ್ಲಿ ಅಂದಾಜು 2 ಎಕರೆ ಬಂದಿರುತ್ತದೆ. ಅದರಂತೆ ಮಲ್ಲೆದೇವರ ಕೆರೆಹಿಂದೆ ವಾದಿಗೆ 3ಎಕರೆ ತೋಟ, ಕಲ್ಲಪ್ಪನಿಗೆ 3 ಎಕರೆ ತೋಟ. ಅದರಂತೆ ಕೆರೆಮುಂದಲ ಹೊಲದಲ್ಲಿ ವಾದಿಗೆ 3 ಎಕರೆಜಮೀನು ಮತ್ತು ಮತ್ತೊಂದು ಕೆರೆಮುಂದಲ ಹೊಲದಲ್ಲಿ ಕಲ್ಲಪ್ಪ, ರುದ್ರಪ್ಪ ಹಾಗೂ ಈಶ್ವರಪ್ಪನಿಗೆ ತಲಾ 2 ಎಕರೆ

ಜಮೀನು. ಬೇರೆ ಸ್ವತ್ತುಗಳ ವಿವರ ನನಗೆ ತಿಳಿದಿಲ್ಲ. ಸದರಿ ಸ್ವತ್ತುಗಳಲ್ಲಿ ನಂಜುಂಡಪ್ಪನಿಗೆ ಎಷ್ಟು ಸ್ವತ್ತು ಬಂದಿರುತ್ತದೆ ನನಗೆ ತಿಳಿದಿಲ್ಲ.

ಪ್ರಶ್ನೆ: ಕಲ್ಲಪ್ಪನ ಪಾಲಿನ ಕೆರೆ ಮುಂದಲ ಹೊಲವನ್ನು ಯಾರು ಯಾವಾಗ ಯಾರಿಗೆ ಮಾರಾಟ ಮಾಡಿರುತ್ತಾರೆ?

ವಾದಿ ಈ ದಾವೆಯನ್ನು ಕೇವಲ ಶಾಶ್ವತ ನಿರ್ಬಂಧಕಾಜ್ಞೆ ಕೋರಿದ್ದು ಸದರಿ ಕೆರೆ ಮುಂದಲ ಹೊಲ ದಾವೆಗೆ ಸಂಬಂಧಿಸದ ಕಾರಣ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಆದ್ದರಿಂದ ಅದನ್ನು ತಳ್ಳಿಹಾಕಲಾಗಿರುತ್ತದೆ.

ಸರ್ವೇ ನಂ.11ರ ಒಟ್ಟು ವಿಸ್ತೀರ್ಣ 6ವರೆ ಎಕರೆ ಇರುತ್ತದೆ. ಸರ್ವೇ ನಂ.11ರ ಸು.ಅರ್ಧ ಫರ್ಲಾಂಗ್ ದೂರದಲ್ಲಿ ನನಗೆ ಸೇರಿದ ಒಂದು ಮನೆ ಇರುತ್ತದೆ. ನನ್ನ ಮನೆ ಹಾಗೂ ಸರ್ವೇ ನಂ.11ರ ನಡುವೆ ನಿಂಗಪ್ಪ, ಈಶ್ವರಪ್ಪ, ಜಯಪ್ಪ, ಬಸಪ್ಪ ಹಾಗೂ ವಾದಿ ಮನೆ ಹಾಗೂ ಸರ್ಕಾರಿ ಜಮೀನು ಇರುತ್ತದೆ.

ಸರ್ವೇ ನಂ.11ನ್ನು ನಾನು ಎಂದಿಗೂ ಸರ್ವೇ ಮಾಡಿಸಿರುವುದಿಲ್ಲ. ಸರ್ವೇ ನಂ.11ರ ಒಟ್ಟು ವಿಸ್ತೀರ್ಣ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಸರ್ವೇ ನಂ.11ರಲ್ಲಿ ವಾದಿ ಕುಟುಂಬದಲ್ಲಿ ಆಗಿರುವ ವಿಭಾಗ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂ.11ರಲ್ಲಿ 1ನೇ ಪ್ರತಿವಾದಿಯ ಗಂಡ 2 ಎಕರೆ 1 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದು ಅದರ ಪೈಕಿ 1 ಎಕರೆಯನ್ನು ನಂಜುಂಡಪ್ಪನಿಂದ ಖರೀದಿಸಿರುತ್ತಾರೆ. ಸದರಿ ಸ್ವತ್ತಿನ ಚಕ್ಕುಬಂದಿ ನನಗೆ ತಿಳಿದಿಲ್ಲ. ಉಳಿದ 1 ಎಕರೆ 1 ಗುಂಟೆ ಜಮೀನು ಆತನಿಗೆ ವಿಭಾಗದಲ್ಲಿ ಬಂದಿರುತ್ತದೆ. ಸದರಿ ಸ್ವತ್ತಿಗೆ ಚಕ್ಕುಬಂದಿ ಪೂರ್ವ-ನಾರಪ್ಪನ ತೋಟ, ಪಶ್ಚಿಮ-ದೇವಸ್ಥಾನ, ಉತ್ತರ- ಮಹೇಶ್ವರಪ್ಪನ ಜಮೀನು, ದಕ್ಷಿಣ-ಈಶ್ವರಪ್ಪನ ಜಮೀನು.

ಕಲ್ಲಪ್ಪ, ರುದ್ರಪ್ಪ ಹಾಗೂ ಈಶ್ವರಪ್ಪ ಯಾವ ಸಾಲಿನಿಂದ ಯಾವ ಸಾಲಿನವರೆಗೆ ಒಟ್ಟು ಕುಟುಂಬದಲ್ಲಿ ಇದ್ದರು ನನಗೆ ಹೇಳಲು ಆಗುವುದಿಲ್ಲ. ಸದರಿ 3 ಜನಕ್ಕೆ ಸರ್ವೇನಂ.11ರಲ್ಲಿ ಎಷ್ಟು ಸ್ವತ್ತು ಇತ್ತು ಹೇಳಲು ಆಗುವುದಿಲ್ಲ.

ದಾವಾ ಸ್ವತ್ತು ವಾದಿಗೆ ಹೇಗೆ ಬಂದಿರುತ್ತದೆ ನನಗೆ ತಿಳಿದಿಲ್ಲ. ದಾವಾ ಸ್ವತ್ತು ವಾದಿಗೆ ತಹಸಿಲ್ದಾರವರ ನ್ಯಾಯಾಲಯದ ಆದೇಶದಂತೆ ಬಂದಿರುತ್ತದೆ ಎಂದರೆ ನನಗೆ ತಿಳಿದಿಲ್ಲ. ವಾದಿಗೆ ದಾವಾ ಸರ್ವೇ ನಂ.ನಲ್ಲಿ 1 ಎಕರೆ 31 ಗುಂಟೆ ಮಾತ್ರ ಇರುವ ಬಗ್ಗೆ ನಾನು ದಾವಾ ಸ್ವತ್ತಿನ ಸರ್ವೇ ಮಾಡಿಸಿರುವುದಿಲ್ಲ. ದಾವಾ ಸ್ವತ್ತನ್ನು ಸರ್ವೇ ಮಾಡಿಸಿದ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸರ್ವೇ ನಂ.11 ಸರ್ವೇ ಮಾಡಿಸಿದ ವಿಷಯ ನನಗೆ ತಿಳಿದಿಲ್ಲ.

ವಾದಿಗೆ ದಾವಾ ಸರ್ವೇ ನಂ.ನಲ್ಲಿ ಕೇವಲ 1 ಎಕರೆ 31 ಗುಂಟೆ ಇರುತ್ತದೆ ಎಂದು ನಾನು ಅಂದಾಜಿನ ಮೇಲೆ ಹೇಳುತ್ತೇನೆ. ಈ ಸಂಬಂಧ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ ಎಂದರೆ ಸರಿ. ಸರ್ವೇ ನಂ.11ರಲ್ಲಿ ವಾದಿ ಹಾಗೂ ಅತನ ಅಣ್ಣ ತಮ್ಮಂದಿರಿಗೆ ಎಷ್ಟು ಎಷ್ಟು ಸ್ವತ್ತು ಬಂದಿರುತ್ತದೆ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಕಲ್ಲಪ್ಪ, ರುದ್ರಪ್ಪ ಹಾಗೂ ಈಶ್ವರಪ್ಪ ಹಾಲಿ ವಿಭಾಗವಾಗಿರುತ್ತಾರೆ. ಅವರು ಯಾವ ಸಾಲಿನಲಿಲ ವಿಭಾಗವಾಗಿರುತ್ತಾರೆ ನನಗೆ ತಿಳಿದಿಲ್ಲ. ಸದರಿ ವಿಭಾಗದಲ್ಲಿ ನಾನು ಭಾಗವಹಿಸಿರಲಿಲ್ಲ. ನಾನು ಸರ್ವೇನಂ.11ರ ಸಂಬಂಧ ಯಾವುದೇ ದಾಖಲೆ ನೋಡಿರುವುದಿಲ್ಲ. ಸರ್ವೇ ನಂ.11 ಹಾಗೂ ವಾದಿ ಕುಟುಂಬದ ಯಾವುದೇ ಸ್ವತ್ತುಗಳ ವಿವರ ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)*

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು,
ಹೊಸದುರ್ಗ.